**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು**

**ಸಿ.ಸಿ 1738/2018** **ಪಿ.** ಡಬ್ಲ್ಯೂ: **3**

**ಸಿ. ಡಬ್ಲು 6**

| | |
|---|---|
| ಸಾಕ್ಷಿದಾರರ ಹೆಸರು ತಂದೆಯ /ಗಂಡನ ಹೆಸರು ವಯಸ್ಸು ಕೆಲಸ ವಾಸ | ಪಿ ಜೆ ಶಿವಮೂರ್ತಿ ಎ. ಎಂ ಗುರುಸ್ವಾಮಿ 58 ವರ್ಷ ಸಂಚಾರ ನಿಯಂತ್ರಕ ಚಾಮರಾಜನಗರ |
| | ಸತ್ಯ ಪ್ರತಿಜ್ಞೆಯ **ಮೇರೆಗೆ** ದಿನಾಂಕ 24-02-2026 |

**ಮುಖ್ಯ ವಿಚಾರಣೆ: ಶ್ರೀ ಎಪಿಪಿ ವಕೀಲರಿಂದ:**

ಸಾಕ್ಷಿಗೆ ಈಗಾಗಲೇ ಗುರುತಿಸಿರುವ ನಿಪಿ-3 ನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು **ಗುರುತಿಸಲಾಯಿತು.**

ದಿ: 20-07-2018 ರಂದು ನಂಜನಗೂಡು ಎ ಪಿ ಎಂ ಸಿ ಯಲ್ಲಿ ಇರುವ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಕೆಎ-09-ಎಫ್ -4251 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ ಆಗಿತ್ತು. ಅದನ್ನು ಅಮಾನತ್ತು ಪಡಿಸಿಕೊಳ್ಳುವ ಸಲುವಾಗಿ ನಾನು ಸಹಿ ಹಾಕಿರುತ್ತೇನೆ ಮತ್ತು ಸದರಿ ಮಹಜರು ಕ್ರಮವನ್ನು 9-30 ರಿಂದ 10 ಗಂಟೆಯವರಗೆ ಬರೆಯಲಾಗಿತ್ತು ಮತ್ತು ನನ್ನ ಜೊತೆಗೆ ಚಾಸಾ-2 ರವರು ಸಹಿ ಮಾಡಿರುತ್ತಾರೆ.

ದಿ: 27-07-2018 ರಂದು ಕೆಎ-09-ಎಫ್ -4251 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ ಅನ್ನು ಇಂಡಿಮೆಟಿ ಬಾಂಡ್ ಮೂಲಕ ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದು ಇಂಡಿಮೆಟಿ ಬಾಂಡ್ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

(ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದ**

ದಿಃ 20-07-2018 ರಂದು ಇಂಡಿಮೆಟಿ ಬಾಂಡ್ ಮೂಲಕ ನಿಮ್ಮ ಕೆಎ-09-ಎಫ್ -4251 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ ನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಸಿ ಎಸ್ ಎಂ ವಕೀಲರಿಂದ .**

ನೀವು ಯಾವುದೇ ಮಹಜರನ್ನು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ಏನು ನಮೂದು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**2 ನೇ ಕಿ.**ಪ್ರ.ದ. ನ್ಯಾ. ದಂ. ನಂಜನಗೂಡು